ಕವಿತೆ

# ಪಯಣ

ನಿನ್ನೂರ ಬಸ್ಸಿನ ಹಾದಿ ಕಾಯುತ್ತಿದ್ದೆ
ಕೂತಲ್ಲಿಯೇ ಹಗಲಾಯಿತು
ಇರುಳಾಯಿತು
ಮತ್ತೆ ಬೆಳಗು ಮತ್ತೆ.

ಋತುಮಾನಗಳು ಉರುಳಿ ಹೋದವು
ಹೆರಳು ಸ್ಫಟಿಕಗೊಂಡಿತು.
ಕಣ್ಣ ಕೆಳಗಣ ಕಪ್ಪು
ಮುಸ್ಸಂಜೆಯಲಿ
ಬೆರೆತು ನಿಂತಿತು.
ಬೆನ್ನ ಹುರಿಗೆ ಹಿಗ್ಗಿನ ನೂರು ಮಾತು
ತಿರು ತಿರುಗಿ ಕೊಂಕಿದ
ಕೊರಳಿಗೆ ಬೇಗುದಿಯ ಮದರಂಗಿ

ನನ್ನ ದಾರಿಯ ಕಾದು ಕಾದು
ನೀನೇ ಕೊಡೆ ಹಿಡಿದು
ಬರಬಹುದೆಂದು ಅನ್ನಿಸಿತ್ತು
ನಾನು ಬರೆದ ಪತ್ರವೇ
ನಿನಗೆ ಸಿಕ್ಕಿರಲಿಕ್ಕಿಲ್ಲ ಅಥವಾ
ನಮೂದಿಸಿದ ವಿಳಾಸವೇ
ತಪ್ಪಾಗಿರಬೇಕು.

ಇದೀಗ ನೋಡು
ಎದುರು ನಿಂತು ಅಪರಿಚಿತನೊಬ್ಬ
'ಅಜ್ಜೀ ಇದೇ ಕೊನೆಯ ಬಸ್ಸೆಂದು
ಎಬ್ಬಿಸುತ್ತಿದ್ದಾನೆ'
ಹೊರಡುವುದು ಈಗಲೂ
ನನ್ನಿಂದ ಸಾಧ್ಯವಿಲ್ಲ...

ಕ್ಷಮಿಸಿ ಬಿಡು
ಹತ್ತದೇ ಬೇರೆ ವಿಧಿಯಿಲ್ಲ.

● ದೀಪ್ತಿ ಭದ್ರಾವತಿ

